ಸಕ್ರಮಗೊಳಿಸಿದರೆ ಇನ್ನೊಂದು ಕಡೆಯಿಂದ ಕೆಲವು ನಾಗರೀಕರು ಅವರ ನಿವೇಶನಕ್ಕೆ ಅಕ್ರಮ ಸಂಪರ್ಕವನ್ನು ತೆಗೆದುಕೊಳ್ಳುತ್ತಾರೆ.

ಇ) ಜಲಮಂಡಳಿಯಿಂದ ಯಾವುದೇ ಪರವಾನಗಿ ನೀಡಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಕೌಟುಂಬಿಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

57 (241); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಬೆಂಗಳೂರು ನಗರದಲ್ಲಿರುವ ವಿವಿಧ ಕೌಟುಂಬಿಕ ನ್ಯಾಯಾಲಯಗಳಿಗೆ ಮಂಜೂರಾಗಿರುವ ನ್ಯಾಯಾಧೀಶರು ಮತ್ತು ಇತರೆ ಹುದ್ದೆಗಳ ಸಂಖ್ಯೆ ಎಷ್ಟು (ಪ್ರತಿ ಕೋರ್ಟ್ ಹಾಲ್ ನಂಬರ್‌ಗೆ ಮಂಜೂರಾಗಿರುವ ಹುದ್ದೆಗಳ ವಿವರಗಳನ್ನು ಒದಗಿಸುವುದು);

ಆ) ಈ ಪೈಕಿ ಎಷ್ಟು ನ್ಯಾಯಾಧೀಶರು ಹಾಗೂ ಇತರೆ ಹುದ್ದೆಗಳು ಭರ್ತಿಯಾಗಿವೆ ಮತ್ತು ಯಾವ ಯಾವ ಕೋರ್ಟ್ ಹಾಲ್‌ಗಳಲ್ಲಿ ನ್ಯಾಯಾಧೀಶರು ಮತ್ತು ಇತರೆ ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ;

ಇ) ನ್ಯಾಯಾಧೀಶರ ಹುದ್ದೆಗಳು ಖಾಲಿ ಇರುವ ಕೋರ್ಟ್ ಹಾಲ್‌ಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು; ಎಷ್ಟು ಅವಧಿಯಿಂದ ಈ ಪ್ರಕರಣಗಳು ನ್ಯಾಯಾಧೀಶರ ಕೊರತೆಯಿಂದಾಗಿ ವಿಲೇವಾರಿಯಾಗದೇ ಉಳಿದಿವೆ;

ಈ) ಕೌಟುಂಬಿಕ ನ್ಯಾಯಾಲಯಗಳಲ್ಲಿ ಹಲವಾರು ತಿಂಗಳುಗಳಿಂದ ನ್ಯಾಯಾಧೀಶರು ಹಾಗೂ ಇತರೆ ಹುದ್ದೆಗಳು ಖಾಲಿ ಇರುವುದರಿಂದ ಸಹಸ್ರಾರು ಸಂಖ್ಯೆಯ ಪ್ರಕರಣಗಳು ಇತ್ಯರ್ಥವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಸಾರ್ವಜನಿಕರ ಹಿತದೃಷ್ಟಿಯಿಂದ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಬೆಂಗಳೂರು ನಗರದಲ್ಲಿರುವ ವಿವಿಧ ಕೌಟುಂಬಿಕ ನ್ಯಾಯಾಲಯಗಳಿಗೆ ಮಂಜೂರಾದ ಹುದ್ದೆಗಳು:–

ನ್ಯಾಯಾಧೀಶರ ಹುದ್ದೆ – 10,

ಇತರೆ ಹುದ್ದೆಗಳ ಸಂಖ್ಯೆ – 218,

ವಿವರಗಳನ್ನು ಅನುಬಂಧ–'ಅ' ಮತ್ತು 'ಬ' ರಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ–'ಅ' ಮತ್ತು 'ಬ' ರಲ್ಲಿ ಒದಗಿಸಲಾಗಿದೆ.

ಇ) ದಿನಾಂಕ: 01.01.2015 ರಂದು ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ:

2ನೇ ಹೆಚ್ಚುವರಿ ಪ್ರಧಾನ ಕೌಟುಂಬಿಕ ನ್ಯಾಯಾಲಯದಲ್ಲಿ – 1519 ಹಾಗು

5ನೇ ಹೆಚ್ಚುವರಿ ಪ್ರಧಾನ ಕೌಟುಂಬಿಕ ನ್ಯಾಯಾಲಯದಲ್ಲಿ – 1367 ಪ್ರಕರಣಗಳು

ಈ) ಪ್ರಕರಣಗಳು ಬಾಕಿ ಇರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಕರ್ನಾಟಕ ನ್ಯಾಯಾಂಗ ಸೇವೆ (ನೇಮಕಾತಿ) ನಿಯಮಗಳು, 2004ಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆಯು ಅಂತಿಮಗೊಂಡಿದ್ದು, ಇಷ್ಟರಲ್ಲಿಯೇ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲು ಉಚ್ಚ ನ್ಯಾಯಾಲಯವು ಕ್ರಮ ಕೈಗೊಳ್ಳಲಿದೆ.

STATEMENT SHOWING THE SANCTIONED STRENGTH, WORKING STRENGTH AND VACANCY POSITION OF JUDICIAL OFFICERS IN RESPECT OF FAMILY COURTS AT BENGALURU CITY AS ON 31.01.2015

Sl. No.	Name of the court	Functioning/ Vacant	Date from which the court has become vacant
1	Prl. Judge, Family Court, Bengaluru.	Functioning	
2	I Addl. Prl. Judge, Family Court, Bengaluru.	Functioning	
3	II Addl. Prl. Judge, Family Court, Bengaluru.	... -Vacant-	27.01.2014
4	III Addl. Prl. Judge, Family Court, Bengaluru.	Functioning.	

5	IV Addl. Prl. Judge, Family Court, Bengaluru.	Functioning	
6	V Addl. Prl. Judge, Family Court, Bengaluru.	-Vacant-	01.01.2015
7	VI Addl. Prl. Judge, Family Court, Bengaluru.	Functioning	
8	VII Prl. Judge, Family Court, Bengaluru.	-Newly created court-	
9	VIII Prl. Judge, Family Court, Bengaluru	-Newly created court-	
10	IX Prl. Judge, Family Court, Bengaluru.	-Newly created court-	

STATEMENT SHOWING THE SANCTIONED, WORKING AND VACANCY POSITION OF THE FAMILY COURTS OF BENGALURU

Sl. No.	Designation	Sanctioned Strength	Working Strength	Vacancy position
		1	2	3
1	Sheristedars	17	14	3
2	First Division Assistants	20	8	12
3	Second Division Assistants	31	8	23
4	Stenographers	14	3	11
5	Typists	10	3	7
6	Typist Copyists	24	14	10
7	Bailiffs	17	12	5
8	Process Servers	31	26	5
9	Attenders /	17	13	4
10	Peons/ watchman	37	10	27
	TOTAL	218	111	107

Note 1) At present Principal, I, III, IV, V and VI Additional family Courts are functi
2) II Additional Family Court is vacant.
3) VII, VIII and IX additional family Courts are not yet started functioning.